CC 1576/2023
CW- 1PW -1

# ಮೂರನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಕನಕಪುರ

**ಸಿ.ಸಿ ನಂ.1576/2023**

ದಿನಾಂಕಃ**.18.12.2025** ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

| ಚಾಸಾ-**1** | ಪ್ರಾಸಾ-**1** |
|---|---|
| ಹೆಸರು | - ಪಾರ್ವತಮ್ಮ |
| ತಂದೆ / ಗಂಡನ ಹೆಸರು | - ಪಾಪಣ್ಣ |
| ವಯಸ್ಸು | - **50** |
| ಉದ್ಯೋಗ | - ಕೂಲಿ ಕೆಲಸ |
| ವಿಳಾಸ | - ಕನಕಪುರ |

**ಮುಖ್ಯವಿಚಾರಣೆ : ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರಿಂದಃ-**

ನ್ಯಾಯಾಲಯದ ಮುಂದಿರುವ ಆರೋಪಿತ ನನಗೆ ಪರಿಚಯ. ಮೃತ ವೆಂಕಟೇಶ್ ನನ್ನ ತಂದೆ. ಚಾಸಾ- **2** ರಿಂದ **6** ನಮ್ಮ ಗ್ರಾಮದವರು. ಚಾಸಾ-**7** ನನ್ನ ತಾಯಿ.

ನನ್ನ ತಂದೆಗೆ ಯಾರು ಅಪಘಾತ ಪಡಿಸಿದರು ಎಂದು ನನಗೆ ಗೊತ್ತಿಲ್ಲ. ನಾನು ಪೊಲೀಸ್ ಠಾಣೆಗೆ ಹೋದಾಗ ಬಿಳಿ ಹಾಳೆಗಳ ಮೇಲೆ ನನ್ನ ಹೆಬ್ಬೆಟ್ಟನ್ನು ಪಡೆದುಜಕೊಂಡರಿದ್ದರು. ಸಾಕ್ಷಿ ಎರಡು ದೂರುಗಳನ್ನು ನೋಡಿ, ಅದರಲ್ಲಿರುವ ಹೆಬ್ಬೆಟ್ಟು ಗುರುತನ್ನು ನೋಡಿ ತನ್ನ ಹೆಬ್ಬೆಟ್ಟು ಗುರುತು ಎಂದು ಗುರುತಿಸಿದ್ದು , ಸದರಿ ಎರಡು **ದೂರಗಳನ್ನು** ನಿಪಿ-**1** ಮತ್ತು **2** ಎಂದು ಗುರುತಿಸಲಾಯಿತು.

ಪೊಲೀಸರು ನನ್ನ ಸಮಕ್ಷಮ ಪಂಚನಾಮೆ ಮಾಡಿರುವುದಿಲ್ಲ.

ಸಾಕ್ಷಿ ಪಂಚನಾಮೆಯನ್ನು ನೋಡಿ ಅದರಲ್ಲಿರುವ ಒಂದು ಹೆಬ್ಬೆಟ್ಟು ಗುರುತು ನೋಡಿ ತನ್ನ ಹೆಬ್ಬೆಟ್ಟು ಗುರುತು ಎಂದು ಗುರುತಿಸಿದ್ದು ಸದರಿ **ಪಂಚನಾಮೆಯನ್ನು** ನಿಪಿ-**3** ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ಧವಾಗಿ ಸಾಕ್ಷ್ಯ ನುಡಿದಿರುವುದರಿಂದ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲನ್ನು ಮಾಡಲು ಮಾನ್ಯ ಸರ್ಕಾರಿ ಅಭಿಯೋಜಕರು ರವರು ಅನುಮತಿಯನ್ನು ಕೋರಿದ್ದು, ಅನುಮತಿಯನ್ನು ನೀಡಲಾಯಿತು.)

ಪಾಟೀ ಸವಾಲುಃ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-

CC 1576/2023
CW- 1PW -1

ದಿಃ **25.12.2018** ರಂದು ಬೆಳಿಗ್ಗೆ **11.30** ಗಂಟೆಗೆ ದೊಡ್ಡಾಆಲಹಳ್ಳಿ ಗ್ರಾಮದ ಗೌರಮ್ಮನವರ ಅಂಗಡಿ ಮುಂದಿನ ಕನಕಪುರ ದೊಡ್ಡಾಲಹಳ್ಳಿ ರಸ್ತೆಯಲ್ಲಿ ಆರೋಪಿ ಅವನ ಮೋಟಾರ ಸೈಕಲ್ ಕೆಎ-**05**-ಜೆಎಫ್ **-6727** ಅನ್ನು ದೊಡ್ಡಾಲಹಳ್ಳಿ ಕಡೆಯಿಂದ ಅತಿವೇಗವಾಗಿ ಬಂದು ಅಜಾರೂಕತೆಯಿಂದ ಚಾಲನೆ ಮಾಡಿಕೊಂಡು ರಸ್ತೆ ಎಡಬದಿಯಲ್ಲಿ ನಡೆದುಕೊಂಡು ಹೋಗುತ್ತಿದ್ದ ನನ್ನ ತಂದೆಗೆ ಡಿಕ್ಕಿ ಹೊಡೆಸಿದ ಪರಿಣಾಮ ಅಪಘಾತವಾಗಿವಾಯಿತು ಎಂದರೆ ಸರಿಯಲ್ಲ . ನನ್ನ ತಂದೆ ಚಿಕಿತ್ಸೆ ಫಲಿಸದೇ ಆಸ್ಪತ್ರೆಯಲ್ಲಿ ದಿಃ **27.12.2018** ರಂದು ಮೃತರಾದರು ಎಂದರೆ ಸರಿ. ಅಪಘಾತ ಆರೋಪಿ ತಪ್ಪಿನಿಂದ ಆಗಿದೆ ಎಂದರೆ ಸರಿಯಲ್ಲ. ಈ ಬಗ್ಗೆ ನಾನು ನಿಪಿ-**1** ಮತ್ತು **2** ಪ್ರಕಾರ ದೂರು ಕೊಟ್ಟಿದ್ದೇನೆಂದರೆ ಸರಿಯಲ್ಲ.

ದಿ. **27.12.2018** ರಂದು ಬೆಳಿಗ್ಗೆ **10.00-10.45** ಗಂಟೆ ಸಮಯದಲ್ಲಿ ನಾನು ತೋರಿಸಿದಂತೆ ನನ್ನ ಹಾಗೂ ಚಾಸಾ-**4** ಮತ್ತು **5** ರವರ ಸಮಕ್ಷಮ ಪೊಲೀಸರು ನಿಪಿ- **3** ರ ಪ್ರಕಾರ ಪಂಚನಾಮೆ ಮಾಡಿದರು ಎಂದರೆ ಸರಿಯಲ್ಲ

ಆರೋಪಿಯೊಂದಿಗೆ ರಾಜಿ ಮಾಡಿಕೊಂಡಿರುವ ಕಾರಣ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**<u>ಪಾಟೀ ಸವಾಲು: ಆರೋಪಿ ಪರ ವಕೀಲರಿಂದಃ</u>**

**<u>ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.</u>**

**<u>ಮರುವಿಚಾರಣೆ ಇಲ್ಲ.</u>**

(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಪಡೆದುಕೊಂಡಿರುತ್ತೇನೆ ಎಂದು ಧೃಢೀಕರಿಸುತ್ತೇನೆ)

ಓದಿ ಹೇಳಿ ಕೇಳಿ ಸರಿ ಇದೆ,

**ಮೂರನೇ ಅಪರ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್ ಸಿ., ಕನಕಪುರ.**